ಗುಂಡ ನಮ್ಮನ್ನು ಸಮಾಧಾನ ಮಾಡಲು ಪ್ರಯತ್ನಿಸಿ ತಾನು ಮನೆಯಿಂದ ತಂದ ಚಕ್ಕುಲಿ ಮತ್ತು ಎಳ್ಳುಂಡೆಯನ್ನು ನಮಗಿಬ್ಬರಿಗೂ ನೀಡಿದ. ಆದರೆ ಶೀನಿ ಇದ್ಯಾವುದರ ಪರಿವೆಯೇ ಇಲ್ಲದಂತೆ ಗಗನನೌಕೆಯನ್ನು ಶರವೇಗದಿಂದ ಓಡಿಸುತ್ತಿದ್ದ. ಅಂತರಿಕ್ಷ ಮಾರ್ಗದ ಮಧ್ಯದಲ್ಲಿ ಅಡ್ಡ ಬರುತ್ತಿದ್ದ ಸಣ್ಣ ಪುಟ್ಟ ಗ್ರಹಗಳು ನಮ್ಮ ನೌಕೆಗೆ ಡಿಕ್ಕಿ ಹೊಡೆಯದಂತೆ ಎಚ್ಚರವಹಿಸುತ್ತಿದ್ದ. ಗುಂಡ ನೌಕೆಯನ್ನು ಮತ್ತಷ್ಟು ವೇಗವಾಗಿ ಚಲಾಯಿಸುವಂತೆ ಶೀನಿಗೆ ಸಲಹೆ ನೀಡಿದ. ಈ ಮಧ್ಯೆ ಇನ್ನೂ ಎರಡು ತಾಸು ಕಳೆಯಿತು. ಆದರೆ ಚಂದ್ರನನ್ನು ತಲುಪುವ ಯಾವ ಸೂಚನೆಯೂ ಕಂಡು ಬರಲಿಲ್ಲ. ಸಾಲದ್ದಕ್ಕೆ ಸೂರ್ಯನೂ ಮುಳುಗಲಾರಂಭಿಸಿ ಸುತ್ತಲೂ ಕತ್ತಲೆ ಕವಿದಾಗ ನಮಗೆ ಇನ್ನೂ ಭಯವಾಯ್ತು. 'ಚಂದ್ರಲೋಕ ಸಾಕು, ಭೂಮಿಗೆ ಮರಳೋಣ' ಎಂದು ಪುನಃ ನಾನು ಮತ್ತು ಕಲ್ಲೇಶಿ ರಾಗ ಎಳೆದೆವು. 'ನಾಳೆ ನಿಮಗೆ ಶಾಲೆಯಲ್ಲಿ ಐಸ್‌ಕ್ಯಾಂಡಿ ತಿನ್ನಿಸುತ್ತೇನೆ. ಸ್ವಲ್ಪ ಹೊತ್ತು ಸುಮ್ಮನಿರಿ' ಎಂದು ಗುಂಡ ನಮ್ಮನ್ನು ಸಾಂತ್ವನ ಪಡಿಸಲು ಪ್ರಯತ್ನಿಸಿದ. ಆದರೆ ನಾವು ಇನ್ನೂ ಜೋರಾಗಿ ಗಲಾಟೆ ಎಬ್ಬಿಸಿದಾಗ ಗುಂಡನಿಗೆ ತಲೆಬಿಸಿಯಾಯ್ತು, ಏನೂ ತೋಚದೆ ತಲೆಗೆ ಕೈಹೊತ್ತು ಕುಳಿತ. ಅಷ್ಟಾಗುವಾಗ...

ಡೂಸ್... ಡೂಸ್... ಡೂಸ್... ಎಂದು ಗಗನನೌಕೆ ಕೆಟ್ಟು ನಿಂತಿತು. ಗುಂಡ ಮತ್ತು ಶೀನಿ ಒಬ್ಬರ ಮುಖವನ್ನೊಬ್ಬರು ನೋಡ ತೊಡಗಿದರು. ಈಗ ಮೆಕ್ಯಾನಿಕ್ ಕಲ್ಲೇಶಿಯ ಸಹಾಯ ಅನಿವಾರ್ಯವಾಗಿತ್ತು. ಗುಂಡ ಗಗನನೌಕೆಯನ್ನು ದುರಸ್ತಿಗೊಳಿಸುವಂತೆ ಅಳುತ್ತಾ ಕುಳಿತ ಕಲ್ಲೇಶಿಯನ್ನು ಕೈಜೋಡಿಸಿ ಕೇಳಿಕೊಂಡ. 'ನಾನು ದುರಸ್ತಿ ಮಾಡುತ್ತೇನೆ. ಆದರೆ ದುರಸ್ತಿಯಾದ ನಂತರ ಭೂಮಿಗೆ ಮರಳುವುದಾದರೆ ಮಾತ್ರ ನನ್ನ ಕೆಲಸ ಮಾಡುತ್ತೇನೆ' ಎಂದು ಷರತ್ತು ಹಾಕಿದ ಕಲ್ಲೇಶಿ. ಗುಂಡನಿಗೆ ಇದಕ್ಕೆ ಒಪ್ಪದೆ ವಿಧಿ ಇರಲಿಲ್ಲ. ಕಲ್ಲೇಶಿ ತನ್ನ ಶಾಲೆಯ ಬ್ಯಾಗ್‌ನಲ್ಲಿ ತುಂಬಿಸಿಕೊಂಡು ಬಂದ ಸ್ಪಾನರ್, ಸುತ್ತಿಗೆ, ಮೊಳೆ ಮುಂತಾದ ಸಾಮಗ್ರಿಗಳನ್ನೆಲ್ಲ ಒಂದೊಂದಾಗಿ ಹೊರ ತೆಗೆದು ಸುಮಾರು ಒಂದು ತಾಸು ಸೆಣಸಾಟ ನಡೆಸಿದ ನಂತರ ಗಗನನೌಕೆ ದುರಸ್ತಿಗೊಂಡಿತು. ಆಗ ಎಲ್ಲರಿಗೂ ಸಂತೋಷವಾಯ್ತು. ಗುಂಡ ಬೇರೆ ದಾರಿಯಿಲ್ಲದೆ ಕೊಟ್ಟ ಮಾತಿನಂತೆ ಗಗನನೌಕೆಯನ್ನು ಭೂಮಿಯತ್ತ ತಿರುಗಿಸುವಂತೆ ಶೀನಿಗೆ ಆದೇಶವಿತ್ತ. ಹೊರಗಡೆ ತುಂಬಾ ಕತ್ತಲು ಕವಿದಿದ್ದರೂ ಶೀನಿ ಚಾಕಚಕ್ಯತೆಯಿಂದ ನೌಕೆಯನ್ನು ಚಲಾಯಿಸಿ ಹೇಗೋ ನಾವು ಭೂಮಿಗೆ ತಲುಪಿದಾಗ ಆಗಲೇ ರಾತ್ರಿ ಗಂಟೆ 10 ಆಗಿತ್ತು. ನಾವು ಚಂದ್ರಲೋಕಕ್ಕೆ ಹೊರಟ ಸುದ್ದಿ ಊರೆಲ್ಲಾ ಹರಡಿ ನಮ್ಮನ್ನು ನೋಡಲು ಊರಿಗೆ ಊರೇ ಅಲ್ಲಿ ನೆರೆದಿತ್ತು. ನಮ್ಮ ಈ ಹುಚ್ಚು ಸಾಹಸಕ್ಕಾಗಿ ಎಲ್ಲರೂ ನಮಗೆ ಸರಿಯಾಗಿ ಮಂಗಳಾರತಿಯನ್ನೂ ಮಾಡಿದರು.

■ ಸೋಮನಾಥ ಎಸ್. ಕರ್ಕೇರ



ಸಂತೋಷ್ ಸಸಿಹಿತ್ಲು

# ಥರಥರ ಅಣಬೆ

■ ಲಲಿತಾ ಹೊಸಪ್ಯಾಟಿ

ಪಟಪಟ ಪಟಪಟ ಮಳೆಹನಿ ಬಿದ್ದರೆ
ಹಬ್ಬಿವೆ ಗುಂಪಲಿ ಸಾಲು ಅಣಬೆ
ಕಣ್ಮನ ಸೆಳೆವ ಛತ್ರಿ ವಿನ್ಯಾಸ
ಗರಿಗೆದರಿವೆ ತೇವದಿ ಈ ಅಣಬೆ

ಥರಥರ ಥರಥರ ಭಾವನೆ ಉಕ್ಕಿಸಿ
ಮುಗುಳು ಬಿಚ್ಚಿವೆ ಬಿಳಿ ಅಣಬೆ
ಮುಗಿಲಿನ ಕಡೆಗೆ ತಲೆಯನು ಎತ್ತಿ
ರಂಗೋಲಿ ಬಿಡಿಸಿವೆ ಹಾಲಣಬೆ

ಜಳಜಳ ಜಳಜಳ ಜಳಕ ಮಾಡಿವೆ
ಸುರಿವ ಮಳೆಯಲಿ ದುಂಡಣಬೆ
ಕಾಡಿನ ದಾರಿಲಿ ತಿಪ್ಪೆ ಗುಂಡಿಲಿ
ಒಣಗಿದ ಮರದಲು ಬೂದಣಬೆ

ಫಳಫಳ ಫಳಫಳ ಮಿಣುಗುತ ಮಿನುಗಿವೆ
ತಾರೆಗಳಂದದಿ ಹಳದಿ ಅಣಬೆ
ಒರಸು ಬಿರಸು ತಂಟೆ ತೋರದೆ
ಒಂಟಿ ಕಾಲಲಿ ನಿಂತಿವೆ ಕರಿಅಣಬೆ

ಬರಬರ ಬರಬರ ರ್‍ವನೆ ಹರಡಿ
ಹೆಡೆ ತೆರೆದಿವೆ ಛತ್ರಿ ಅಣಬೆ
ಬೀಜ ಬಿತ್ತದೆ ಗೊಬ್ಬರ ಚೆಲ್ಲದೆ
ಕಣ್ಣನು ಬಿಟ್ಟಿವೆ ಕಿರು ಅಣಬೆ

ಸರಸರ ಸರಸರ ಕಿತ್ತುಕೊಂಡರೆ
ಕೊಯ್ಯದೆ ಕೈಯೊಳು ಸಣ್ಣಣಬೆ
ಊಟಕೂ ಆಟಕೂ ಹಗೆಯೇ ಇಲ್ಲ
ಬಯಲುಸೀಮೆಯ ರುಚಿ ಅಣಬೆ

ತರತರ ತರತರ ತರಕಾರಿಯಂತೆ
ಅಡುಗೆಗೆ ಬೇಕು ತಾಜಾ ಅಣಬೆ
ಜೀವಕೆ ಕಂಟಕ ವಿಷದ ಅಣಬೆ
ಎಚ್ಚರದಿಂದಿರೆ ಒಳಿತೆಮಗೆ ■

## ಕುಂಚ ಪ್ರಪಂಚ



ಇಂಚರಾ ಬಿ.ಆರ್.
7ನೇ ತರಗತಿ,
ಎನ್‌ಇಟಿ ಪಬ್ಲಿಕ್ ಸ್ಕೂಲ್

